ಅಸಲು ದಾವೆ ಸಂಖ್ಯೆ- 81/2018
ಪಿಡಬ್ಲ್ಯೂ- 01
ದಿನಾಂಕಃ 02.09.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎನ್ ಎಸ್ ಪಿ ವಕೀಲರಿಂದ

ನಾವು ಈ ದಾವೆಯನ್ನು ನಮಗೆ ಆಸ್ತಿ ಬೇಕು ಅಂತಾ ಹಾಕಿರುತ್ತೇವೆ. ದಾವೆಗೆ ಮಾಹಿತಿ ನಾನೇ ಕೊಟ್ಟಿರುತ್ತೇನೆ. ನಮ್ಮ ಅಜ್ಜನ ಹೆಸರು ಮಹಾದೇವಪ್ಪ ಸಂಕದಾಳ. ಸದರಿ ಮಹಾದೇವಪ್ಪನಿಗೆ ಫಕ್ಕೀರಪ್ಪ ಒಬ್ಬನೇ ಮಗ ಎನ್ನುವುದು ಸರಿ. ಸದರಿ ಫಕ್ಕೀರಪ್ಪ ನನ್ನ ತಂದೆ. ನಮ್ಮ ಗ್ರಾಮದಲ್ಲಿ ಫಕ್ಕೀರಪ್ಪ ಮಹಾವೇಪ್ಪ ಸಂಕದಾಳ ಎಂದರೆ ಒಬ್ಬರೇ ಇರುತ್ತಾರೆ ಎಂದರೆ ಸರಿ, ಅವರನ್ನು ಹೊರತುಪಡಿಸಿ ಬೇರೆ ಯಾರೂ ಇಲ್ಲ ಎಂದರೆ ಸರಿ. ನಮ್ಮ ಮನೆತನಕ್ಕೆ ನಮ್ಮ ತಂದೆ ಹೆಸರಿನಲ್ಲಿ ಎಷ್ಟು ಆಸ್ತಿಗಳಿದ್ದವು ಅಂತಾ ನನಗೆ ನೆನಪಿಲ್ಲ. ದಾವಾ ಆಸ್ತಿಯ ನಂ.63/38 4 ಎಕರೆ 33 ಗುಂಟೆ ಇರುತ್ತದೆ ಮತ್ತು ಒಂದು ಮನೆ ಇರುತ್ತದೆ. ಮನೆ ನಂ.394 ಇರುತ್ತದೆ. ಸದರಿ ದಾವಾ ಆಸ್ತಿಗಳಿಗೆ ನನ್ನ ತಂದೆ ಹೆಸರು ಯಾವಾಗ ದಾಖಲಾಗಿರುತ್ತದೆ ಗೊತ್ತಿಲ್ಲ. ನಮ್ಮ ತಂದೆ ಹೆಸರಿನಲ್ಲಿ ಯಲವಿಗಿ ಗ್ರಾಮದ ಸರ್ವೆ ನಂ.5/ಬ ವಿಸ್ತೀರ್ಣ 3 ಎಕರೆ 28 ಗುಂಟೆ ಇರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಗಾಂವಠಾಣ ನಂ.26/ಬ ವಿಸ್ತೀರ್ಣ ಒಂದೂವರೆ ಗುಂಟೆ ಆಸ್ತಿ ನನ್ನ ತಂದೆ ಹೆಸರಿನಲ್ಲಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಈ ದಾವಾ ಆಸ್ತಿಗಳ ಕುರಿತು 1996 ರಲ್ಲಿ ನಮ್ಮ ಕುಟುಂಬದಲ್ಲಿ ಕೌಟುಂಬಿಕ ವ್ಯವಸ್ಥೆ ಮಾಡಿಕೊಂಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕೌಟುಂಬಿಕ ವ್ಯವಸ್ಥೆಯಲ್ಲಿ ದಾವಾ ಆಸ್ತಿ ನಂ.63/3 ಬ/1 ವಿಸ್ತೀರ್ಣ 4 ಎಕರೆ 30 ಗುಂಟೆ ಜಮೀನು ನನ್ನ ಸಹೋದರನಿಗೆ ಅಂದರೆ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂ.5/ಬ ಮತ್ತು ಗಾಂವಠಾಣ ನಂ.26/ಬ ನನ್ನ ತಂದೆ ಪಾಲಿಗೆ ಬಂದಿರುತ್ತವೆ ಎಂದರೆ ಸರಿ. ಸದರಿ ಕುಟುಂಬ ವ್ಯವಸ್ಥೆಯಾದ ನಂತರ ಅದರಂತೆ ದಾವಾ ಆಸ್ತಿಗಳು ಹಾಗೂ ಉಳಿದ ಆಸ್ತಿಗಳು ಅವರವರ ಹೆಸರಿನಲ್ಲಿ ದಾಖಲಾಗಿರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಏನೂ ಗೊತ್ತಿಲ್ಲ ಅಂತಾ ನುಡಿಯುತ್ತಾರೆ. ಈ ಕುರಿತು ಡ ನಂ.8055, 1996 ರಲ್ಲಿಯೇ ಮಂಜೂರಾಗಿರುತ್ತದೆ ಎಂದರೆ ನನ್ನ ತಮ್ಮನ ಹೆಸರಿನಲ್ಲಿ ಆಗಿರುತ್ತದೆ. ಅದೇ ಸಮಯದಲ್ಲಿ ಉಳಿದ ಆಸ್ತಿಗಳು ನಮ್ಮ ತಂದೆ ಹೆಸರಿನಲ್ಲಿ ದಾಖಲಾಗಿರುತ್ತವೆ ಎನ್ನುವುದು ನನಗೆ ಗೊತ್ತಿಲ್ಲ. 1996 ರಿಂದ ಇಲ್ಲಿಯವರೆಗೆ ಪ್ರತಿವಾದಿಯ ಹೆಸರಿನಲ್ಲಿ ದಾವಾ ಆಸ್ತಿಯ ಉತಾರೆಗಳು ಇರುತ್ತವೆ ಎಂದರೆ ಸರಿ. 1996 ರಿಂದ

ಇಲ್ಲಿಯವರೆಗೆ ಪ್ರತಿವಾದಿ ದಾವಾ ಆಸ್ತಿಯ ಕಬ್ಜೆಯಲ್ಲಿರುತ್ತಾನೆ ಎನ್ನುವುದು ಸರಿ. ನಾನು ಕೌಟುಂಬಿಕ ವ್ಯವಸ್ಥೆಯ ಸಮಯದಲ್ಲಿ ಮೌಖಿಕವಾಗಿ ಒಪ್ಪಿಗೆ ಸೂಚಿಸಿರುತ್ತೇನೆ ಎನ್ನುವುದು ಸರಿಯಲ್ಲ. ದಾವಾ ಮಾಡುವ ಸಮಯದಲ್ಲಾಗಲೀ ಅಥವಾ ಅದಕ್ಕಿಂತ ಮೊದಲು ದಾವಾ ಆಸ್ತಿಗಳು ಪ್ರತಿವಾದಿಯ ಕಬ್ಜೆಯಲ್ಲಿರುತ್ತವೆ ಎಂದರೆ ಸರಿ. 1996ರಲ್ಲಿ ಆದ ಹಕ್ಕು ದಾಖಲಾತಿಯನ್ನು ಪ್ರಶ್ನಿಸಿಲ್ಲ ಎಂದರೆ ನಾನು ನನ್ನ ಮದುವೆಗಿಂತ ಮುಂಚಿನಿಂದಲೂ ಪ್ರತಿವಾದಿಗೆ ಪಾಲು ಕೇಳುತ್ತಾ ಇದ್ದೆ ಅಂತಾ ನುಡಿಯುತ್ತಾರೆ. 1996 ನೇ ಇಸ್ವಿಯಲ್ಲಿ ಹಾಗೂ ಮದುವೆಯಾದ ಮೇಲೂ ಸಹ ಪಾಲು ಕೇಳಿರುತ್ತೇನೆ. ಆವಾಗ ದಾವೆ ಮಾಡಿರಲಿಲ್ಲ. ಆಗ ದಾವೆ ಮಾಡಲು ತೊಂದರೆ ಇರಲಿಲ್ಲ ಎಂದರೆ ನಾನು ಮಾಡಿಲ್ಲ. ಆಸ್ತಿ ನಂ.5/ಬ ಮತ್ತು ಗಾಂವಠಾಣ ನಂ.26/ಬ ಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನಾನು 3 ನೇ ತರಗತಿಯವರೆಗೆ ಶಾಲೆ ಕಲಿತಿದ್ದೇನೆ. ಪ್ರತಿವಾದಿ ಹೈಸ್ಕೂಲವರೆಗೆ ಕಲಿತಿರುತ್ತಾನೆ. ನನಗೆ ಓದಲು ಬರುವುದಿಲ್ಲ. ಮಹಾಂತವ್ವ ಫಕ್ಕೀರಪ್ಪ ಸಂಕದಾಳ ನನ್ನ ಸಹೋದರಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಹಾಂತವ್ವ ನನ್ನ ಖಾಸಾ ಸಹೋದರಿ ಎಂದರೆ ಸರಿಯಲ್ಲ. ಸದರಿ ಮಹಾಂತವ್ವ ಯಲವಿಗಿ ಗ್ರಾಮದ ಹಡಪದ ಎಂಬಾತ ಜೊತೆ ಪ್ರೀತಿಸಿ ಮದುವೆಯಾಗಿರುತ್ತಾಳೆ ಎನ್ನುವುದು ನನಗೆ ಗೊತ್ತಿಲ್ಲ. ಮಹಾಂತವ್ವ ಸಹ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಬೇಕಿತ್ತು ಎಂದರೆ ನಾನು ಮತ್ತು ಪ್ರತಿವಾದಿ ಇಬ್ಬರೇ ಮಾತ್ರ ನನ್ನ ತಂದೆಗೆ ಮಕ್ಕಳು ಇರುತ್ತೇವೆ. ಮಹಾಂತವ್ವ ಯಲವಿಗಿಯಲ್ಲಿ ಶಾಲೆ ಕಲಿತಿರುತ್ತಾಳೆ ಮತ್ತು ಆ ಕುರಿತು ಪ್ರಮಾಣಪತ್ರ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ ನನ್ನ ತಂದೆ ಜೀವಂತ ಇದ್ದಾಗ ಕೌಟುಂಬಿಕ ವ್ಯವಸ್ಥೆಯಡಿ ಮನೆ ಆಸ್ತಿಯನ್ನು ಪ್ರತಿವಾದಿ ಹೆಸರಿಗೆ ದಾಖಲು ಮಾಡಿರುತ್ತಾರೆ ಎಂದರೆ ಸರಿ. ಅಂದಿನಿಂದ ಇಲ್ಲಿಯವರೆಗೆ ಸದರಿ ಮನೆ ಆಸ್ತಿ ಅವನ ಕಬ್ಜೆಯಲ್ಲಿರುತ್ತದೆ ಎಂದರೆ ಸರಿ. ಮದುವೆ ಕಾಲಕ್ಕೆ ಸಾಕಷ್ಟು ಬಂಗಾರ ಮತ್ತು ದುಡ್ಡು ಕೊಟ್ಟು ಮದುವರೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಾನೆ ಎಂದರೆ ಸರಿ. 7-8 ವರ್ಷದ ಹಿಂದೆ ನಾವು ಮನೆ ಕಟ್ಟಿಸಿರುತ್ತೇವೆ ಎಂದರೆ ಸರಿ. ಮನೆ ಕಟ್ಟುವಾಗ 3 ಲಕ್ಷ ರೂಪಾಯಿ ಹಣ ಕೊಟ್ಟಿದ್ದ ಎಂದರೆ ಸರಿಯಲ್ಲ. 50 ಸಾವಿರ ಕೊಟ್ಟಿದ್ದ ಮರಳಿ ಕೊಟ್ಟಿದ್ದೇನೆ. ನಾನು 50 ಸಾವಿರ ರೂಪಾಯಿ ಮರಳಿ ಕೊಟ್ಟಿದ್ದೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 3 ಲಕ್ಷ ಮಾತ್ರ ಕೊಟ್ಟಿದ್ದಕ್ಕೆ ನನ್ನ ಗಂಡ ಈ ದಾವೆ ಮಾಡಿಸಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿ ಹಣ ಕೊಟ್ಟಿದ್ದರೂ ಸಹ ಇಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಮನೆ ದಾವಾ ಮಾಡುವ ಕಾಲಕ್ಕೆ 15-20 ಲಕ್ಷ ಬಾಳುತ್ತಿತ್ತು ಎಂದರೆ ಸರಿಯಲ್ಲ. ಅಂದಾಜು 10 ಲಕ್ಷ ಆಗಬಹುದು ಎಂದರೆ ಆಗಬಹುದು.

ದಾವಾ ಜಮೀನು ಯಲವಿಗಿ ಗ್ರಾಮಕ್ಕೆ ಹೊಂದಿಕೊಂಡು ಇರುತ್ತದೆ ಎಂದರೆ ಸರಿ. ಸದರಿ ಜಮೀನು 8-10 ಲಕ್ಷ ಬೆಲೆ ಇರುತ್ತದೆ ಎಂದರೆ 15 ಲಕ್ಷ ಎಕರೆಗೆ ಇರುತ್ತದೆ.

ಪ್ರತಿವಾದಿಗೆ ಯಾವ ದಿನಾಂಕದಂದು ಪಾಲು ವಿಭಾಗ ಕೇಳಲು ಬಂದಿದ್ದೆ ಎಂದರೆ 3 ನೇ ತಿಂಗಳು 1 ನೇ ತಾರೀಖಿನಂದು 2018 ರಂದು ಬಂದಿದ್ದೆ. ನಾನು ಮತ್ತು ನನ್ನ ಮಗಳು ಬಂದಿದ್ದೆವು. ಪ್ರತಿವಾದಿಗೆ  ಪಾಲು ಕೇಳುವಾಗ ನಾವು ಮಾತ್ರ ಇದ್ದೆವು ಬೇರೆ ಯಾರೂ ಇರಲಿಲ್ಲ. ನನ್ನ ತಮ್ಮನಿಗೆ ತೊಂದರೆ ಕೊಡಬೇಕು ಅಂತಾ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಮಹಾಂತವ್ವ ನನ್ನ ಸಹೋದರಿ ಇದ್ದರೂ ಸಹ ಉದ್ದೇಶಪೂರ್ವಕವಾಗಿ ಅವಳನ್ನು ಬಿಟ್ಟು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕೌಟುಂಬಿಕ ವ್ಯವಸ್ಥೆ ಮೂಲಕ ದಾವಾ ಆಸ್ತಿಯನ್ನು ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದರಿಂದ ದಾವೆ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.

Case called out, Plaintiff No.1 and counsel present. MSM files memo with 1 document. Plaintiff No.1 filed affidavit on oath she is examined as PW-1 exp-1 to 4 marked. Fully cross examined. MSM submits no further evidence. Hence side of plaintiff is closed. CSM submits no oral evidence of defendants. Hence side of defendants is closed. For plaintiff arguments on merits . Call on 16-10-2020

CJ and JMFC. Savanur

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿಯರು ಗೈರು ಹಾಜರಿದ್ದು, ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಕಾರಣವಿಲ್ಲದೇ ಸಮಯಾವಕಾಶ ಕೋರಿರುತ್ತಾರೆ. ಮನವಿಯನ್ನು ತಿರಸ್ಕರಿಸಲಾಯಿತು. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ವಾದಿ ಮತ್ತು ವಾದಿ ಪರ ವಕೀಲರು ಗೈರು ಹಾಜರು ಇದ್ದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.